ಕಲಾವಿದರ ತಂಡಗಳು ಅಂತಹ ಪ್ರಯತ್ನಗಳನ್ನು ಮಾಡುತ್ತ ಬಂದಿದ್ದಾರೆ. ಇತ್ತೀಚೆಗೆ ಡಿಜಿಟಲ್ ಯುಗ ಬಂದಮೇಲೆ, ನಮ್ಮ ಶಾಸ್ತ್ರೀಯ ಕಲೆಗಳನ್ನು ಡಿಜಿಟಲ್ ವರ್ಗದ ಪ್ರೇಕ್ಷಕರಿಗೆ ತಲುಪಿಸುವುದು ಹೇಗೆ ಎಂಬ ಪ್ರಶ್ನೆ ಕಲಾವಿದರಲ್ಲಿ ಮೂಡುವುದು ಸಹಜ. ಆ ನಿಟ್ಟಿನಲ್ಲಿ ಅನೇಕರು ತಮಗೆ ತೋಚಿದ ರೀತಿಯಲ್ಲಿ ಇಂತಹ ಪ್ರಯತ್ನಗಳನ್ನು ಮಾಡುತ್ತಾರೆ. ಇವೆಲ್ಲವೂ ಶಾಸ್ತ್ರೀಯ ಕಲಾಪ್ರಕಾರಗಳ ಬೆಳವಣಿಗೆಯಲ್ಲಿ ಒಂದು ಹಂತವಷ್ಟೇ. ಅಂತಿಮವಾಗಿ ಗಟ್ಟಿಯಾಗಿ ನಿಲ್ಲುವುದು ಭಾರತೀಯತೆಯನ್ನು ಪ್ರತಿನಿಧಿಸುವ ಸಾಹಿತ್ಯ ಕೃತಿಗಳು. ಅಂದರೆ ಒಬ್ಬರು ಕಲಾವಿದರು ನ್ಯೂಯಾರ್ಕ್ ಸಭಾಂಗಣದಲ್ಲಿ ನರ್ತಿಸುವಾಗ ಅಲ್ಲಿನ ರಸಿಕರು, ಭಾರತೀಯ ಕಲಾಪ್ರಕಾರದ ಸತ್ವವು ಈ ನೃತ್ಯದಲ್ಲಿ ಇದೆಯೇ ಎಂದು ಗಮನಿಸುತ್ತಿರುತ್ತಾರೆ. ಒಟ್ಟು ಪ್ರಸ್ತುತಿಯು ಪ್ರೇಕ್ಷಕರ ಆಲೋಚನಾಕ್ರಮದಲ್ಲಿ ಒಂದು ಪಲ್ಲಟವನ್ನು ಸೃಷ್ಟಿಸಬಲ್ಲುದೇ, ಅವರು ಒಂದು ಹೆಜ್ಜೆ ಒಳಿತಿನೆಡೆಗೆ ಒಂದು ಹೆಜ್ಜೆಯನ್ನು ಎತ್ತಿಡುವುದು ಸಾಧ್ಯವೇ ಎಂದು ಯೋಚಿಸುತ್ತಾರೆ. ಹೀಗೆ ಗಟ್ಟಿಕಾಳು ಆಗಿದ್ದರೆ ಅದು ಉಳಿದುಕೊಳ್ಳುತ್ತದೆ. ಬೆಳೆಯುತ್ತದೆ. ಜೊಳ್ಳಾಗಿದ್ದರೆ ಕೊಂಚ ಕಾಲದಲ್ಲಿ ತೇಲಿಹೋಗುತ್ತದೆ. ಅದನ್ನು ಮೌಲ್ಯಮಾಪನ ಮಾಡುತ್ತ ತೀರ್ಪುಕೊಡುವುದು ಸರಿಯಲ್ಲ.

ಎರಡನೆಯದಾಗಿ, ಡಿಜಿಟಲ್ ಯುಗದ ದೊಡ್ಡ ಅಪಾಯವೆಂದರೆ, ಪ್ರೇಕ್ಷಕರ ಗಮನ ಸೆಳೆಯುವ ಉದ್ದೇಶದಿಂದಲೇ ಗಿಮಿಕ್‌ಗಳನ್ನು ಮಾಡುವುದು. ಸಭಾಂಗಣದಲ್ಲಿ ಚಪ್ಪಾಳೆಯನ್ನು ಗಿಟ್ಟಿಸಿಕೊಳ್ಳುವುದು, ಫೇಸ್‌ಬುಕ್, ಇನ್‌ಸ್ಟಗ್ರಾಂನಲ್ಲಿ ಹೆಚ್ಚು ಲೈಕ್ ಮತ್ತು ಕಮೆಂಟ್‌ಗಳನ್ನು ಗಳಿಸುವುದು ಉದ್ದೇಶವಾಗಿದ್ದರೆ, ಅಂತಹ ಪ್ರಸ್ತುತಿಯಲ್ಲಿ ಹುರುಳಿರುವುದಿಲ್ಲ ಎಂದುಕೊಂಡಿದ್ದೇನೆ. ಅಂದಮಾತ್ರಕ್ಕೆ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳಬಾರದು ಎಂದೇನಿಲ್ಲ. ಮೊದಲ ಆದ್ಯತೆ ನೃತ್ಯದ ಅಥವಾ ಕಲೆಯ ಉತ್ಕೃಷ್ಟತೆಯನ್ನು ಸಾಧಿಸುವುದಾಗಿದ್ದು, ಇಂತಹ ಪ್ರಚಾರಗಳು ಅದಕ್ಕೆ ಪೂರಕವಾಗಿದ್ದಾಗ ತೊಂದರೆಯಾಗುವುದಿಲ್ಲ. ಗಮನಸೆಳೆಯುವುದೇ ಕಲೆಯ ಉದ್ದೇಶ ಅಲ್ಲವಲ್ಲ. ಸಂಗಮ್ ಕಾವ್ಯವಿದೆ, ದಾಸಸಾಹಿತ್ಯವಿದೆ. ಭಕ್ತಿಪಂಥವಿದೆ, ಶಾಕ್ತ, ವೈಷ್ಣವ, ಶೈವ ಎಂಬುದಾಗಿ ಸಿರಿವಂತ ಸಾಹಿತ್ಯ ಭಂಡಾರವೇ ನಮ್ಮ ಮುಂದಿದೆ. ಆದ್ದರಿಂದ ಹೊಸತನವೆಂದರೆ ಅದೆಲ್ಲವೂ ಸಮಕಾಲೀನವೇ ಆಗಿರಬೇಕಾಗಿಲ್ಲ.

◆ **ಕಲಾವಿದರ ವೈಯಕ್ತಿಕ ಜೀವನಶೈಲಿ ಮತ್ತು ಅವರು ವೇದಿಕೆಯಲ್ಲಿ ಪ್ರಸ್ತುತಪಡಿಸುವ ಕಾರ್ಯಕ್ರಮಗಳ ನಡುವೆ ಅಂತರವಿರುತ್ತದೆ. ಇಂತಹ ಅರಿವು ನಿಮ್ಮ ಬರವಣಿಗೆಯ ಮೇಲೆ ಪ್ರಭಾವ ಬೀರುತ್ತದೆಯೇ? ಕಲಾವಿಮರ್ಶೆ ಎನ್ನುವುದು ತುಂಬಾ ಶಿಸ್ತನ್ನು ಬಯಸುವ ಒಂದು ವೃತ್ತಿಯೇ? ನಿಮ್ಮ ಅನುಭವವೇನು?**

ಇತ್ತೀಚೆಗಿನ ದಶಕಗಳಲ್ಲಿ ಕಲಾವಿದರ ಸಂಖ್ಯೆ ಹೆಚ್ಚಾಗಿದೆ ನಿಜ. ವೇದಿಕೆಯ ಮೇಲೆ ಭಕ್ತಿಯನ್ನೋ, ದೇವರ ಮಹಿಮೆಯನ್ನೋ ಕೊಂಡಾಡುವ, ದೇವರಿಗೆ ಶರಣು ಹೋಗುವ ಕಲಾವಿದರು ವೇದಿಕೆಯಿಂದ ಇಳಿದ ತಕ್ಷಣ ತಮ್ಮದೇ ಅಹಮಿಕೆ ಕೋಟೆಯಲ್ಲಿ ನಿಂತುಬಿಡುತ್ತಾರೆ. ಅವರೊಡನೆ ಮಾತನಾಡುವಾಗ ಕಲೆಯ ಕುರಿತು ಮಾತನಾಡುವುದಕ್ಕಿಂತಲೂ ಹೆಚ್ಚಾಗಿ ಸ್ವಯಂ ಸಾಧನೆಗಳ ಕುರಿತೇ ಓತಪ್ರೋತವಾಗಿ ಮಾತನಾಡುತ್ತಾರೆ. ಈ ದ್ವಿಪಾತ್ರಾಭಿನಯದಿಂದಾಗಿ ಪ್ರೇಕ್ಷಕರು ಕಲೆಯಿಂದ ದೂರ ಸರಿಯಲೂಬಹುದು. ತನಗಿಂತ ಕಲೆಯೇ ಮೇಲು ಎನ್ನುವ ದೃಷ್ಟಿಕೋನವು ಪ್ರತಿಯೊಬ್ಬ ಕಲಾವಿದನಿಗೂ ಇರಬೇಕು ಎಂದು ನಾನು ಭಾವಿಸುತ್ತೇನೆ. ಭಾರತದ ಹೊರಗೆ ಇರುವ ಭಾರತೀಯರಿಗೆ ಭಾರತೀಯತೆಯ ಬಗ್ಗೆ ಹೆಚ್ಚಿನ ಆಸ್ಥೆಯಿದೆ. ಇಲ್ಲಿ ಸಲೀಸಾಗಿ ಲಭ್ಯ ಇರುವ ವಾತಾವರಣ ಸೌಕರ್ಯಗಳು ಅಲ್ಲಿ ಅವರಿಗೆ ಲಭ್ಯವಿಲ್ಲ. ಆದ್ದರಿಂದ ಕಳೆದುಕೊಳ್ಳುತ್ತಿರುವ ವಿಷಯಗಳ ಬಗ್ಗೆ ಗೌರವ ಹೆಚ್ಚಾಗಿರುತ್ತದೆ.

ಹಾಗೆನೋಡಿದರೆ ಇಂಟರ್ನೆಟ್‌ನ ಆಗಮನದಿಂದ ಕಲಾವಿದರ ಏಕಾಗ್ರತೆಗೆ ಭಂಗ ಬಂತೆನಿಸುತ್ತದೆ. ಯಾಕೆಂದರೆ ಕಲಾವಿದ್ಯಾರ್ಥಿಗಳು ಒಂದು ಪುಸ್ತಕವನ್ನು ಖರೀದಿಸಿ ಓದಿ ಎಂದರೆ ಮೀನಾಮೇಷ ಎಣಿಸುತ್ತಾರೆ. ಆದರೆ ಎಪ್ಪತ್ತು ಸಾವಿರ ರೂಪಾಯಿಯ ಫೋನ್ ಖರೀದಿಸಲು ಹಿಂದೆ ಮುಂದೆ ನೋಡುವುದಿಲ್ಲ. ಪೋಷಕರೂ ಅಷ್ಟೊಂದು ದುಡ್ಡು ಖರ್ಚು ಮಾಡಲು ಹಿಂಜರಿಯುವುದಿಲ್ಲ. ಹಾಗಿದ್ದರೆ ವಿದ್ಯಾರ್ಥಿಗಳ